# ಮೂಲೆಗುಂಪಾಗುತ್ತಿರುವ ಸಾಮಾಜಿಕ ಮೌಲ್ಯಗಳುಳ್ಳ ನಾಟಕಗಳು

**ತುರುವೇಕೆರೆ**

ಸಿನಿಮಾ ಮತ್ತು ಟಿವಿ ಧಾರಾವಾಹಿಗಳ ಅಬ್ಬರದಲ್ಲಿ ಸಾಮಾಜಿಕ ಕಳಕಳಿ ಹಾಗೂ ಮೌಲ್ಯಗಳುಳ್ಳ ನಾಟಕಗಳು ಮೂಲೆಗುಂಪಾಗುತ್ತಿವೆ ಎಂದು ಕಸಾಪ ನಿಕಟಪೂರ್ವ ಅಧ್ಯಕ್ಷ ಸಾ.ಶಿ.ದೇವರಾಜ್ ವಿಷಾದ ವ್ಯಕ್ತಪಡಿಸಿದರು.



ಪಟ್ಟಣದ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನಲ್ಲಿ ನಾಟಕೋತ್ಸವ ಸಮಿತಿ, ರೋಟರಿ ಕ್ಲಬ್, ಲಯನ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಶನಿವಾರ ಸಂಜೆ ಏರ್ಪಡಿಸಿದ್ದ ಒಬ್ಬಳು ಏಕವ್ಯಕ್ತಿ ನಾಟಕ ಪ್ರದರ್ಶನದ ಅಂಗವಾಗಿ ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ ನಾಟಕಗಳ ಮೂಲಕ ನಡೆಯುತ್ತಿದ್ದ ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಸರಣೆಯ ಅರಿವೇ ಇಲ್ಲವಾಗಿದೆ ಎಂದರು.

ಸಮಾರಂಭವನ್ನು ಉದ್ಘಾಟಿಸಿದ ಚೌಧ್ರಿ ನರ್ಸಿಂಗ್ ಹೋಂನ ಡಾ.ಚೌಧ್ರಿ ನಾಗೇಶ್ ಮಾತನಾಡಿ ನಾಟಕ ಒಂದು ಪ್ರಬಲವಾದ ಸಂವಹನ ಮಾಧ್ಯಮ. ನಾಟಕಗಳ ಮೂಲಕ ಸಾಮಾಜಿಕ ಅರಿವು ಮೂಡಿಸುವ ಪ್ರಯತ್ನ ನಡೆಯಬೇಕಿದೆ. ಒಬ್ಬಳು ನಾಟಕ ಶೋಷಿತ ಸಾವಿರಾರು ಹೆಣ್ಣುಮಕ್ಕಳ ಪ್ರತಿಧ್ವನಿಯಾಗಿದೆ ಎಂದರು.

ನಾಟಕ ಸಂಚಾಲಕ ಹಾಗೂ ಸಾಹಿತಿ ತುರುವೇಕೆರೆ ಪ್ರಸಾದ್ ಮಾತನಾಡಿ ಹೊಸಚಿಗುರು ಹಳೆಬೇರು ಎಂಬಂತೆ ನಮ್ಮ ಪೌರಾಣಿಕ ಹಾಗೂ ಚಾರಿತ್ರಿಕ ನೆಲೆಗಟ್ಟಿನ ರಂಗಭೂಮಿಯನ್ನು ಉಳಿಸಿಕೊಂಡೇ ನಾವು ಪ್ರಯೋಗಶೀಲತೆಯ ಹೊಸ ಚಿಗುರನ್ನು ಹುಟ್ಟು ಹಾಕಬೇಕಿದೆ. ಸಾಂಪ್ರದಾಯಿಕ ನಾಟಕಗಳಲ್ಲಿನ ಮೌಲ್ಯಗಳನ್ನೇ ಆಧುನಿಕ ಪರಿಭಾಷೆಯಲ್ಲಿ ಹೇಳುವ ಪ್ರಯತ್ನ ಮಾಡಬೇಕೇ ವಿನಃ ಆ ಮೌಲ್ಯಗಳ ತುಚ್ಛೀಕರಣ ಅಥವಾ ಅವುಗಳ ಮೇಲೆ ಆಕ್ರಮಣ ನಡೆಯಬಾರದು ಎಂದರು.

ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರ ಶೋಷಣೆ ನಿರಂತರವಾಗಿದೆ. ಹೊರಗಿನ ಶೋಷಣೆಗಿಂತ ಹೆಣ್ಣು ತನ್ನ ಮನೆಯಲ್ಲೇ ತನ್ನವರಿಂದಲೇ ಶೋಷಣೆಗೆ ಒಳಗಾಗುತ್ತಿದ್ದಾಳೆ. ತನಗೆ ಆಪ್ತವಾದ ಸಂಬಂಧಗಳ ನಡುವೆಯೇ ಬಂಧಿಯಾಗಿ ಸ್ವಾತಂತ್ರ್ಯಕ್ಕಾಗಿ ಹಪಹಪಿಸುವ ಸಾವಿರಾರು ಹೆಣ್ಣುಮಕ್ಕಳನ್ನು ಈ ನರಕದಿಂದ ಬಿಡುಗಡೆಗೊಳಿಸಬೇಕು ಎಂದು ರಾಜ್ಯ ಪ್ರಶಸ್ತಿ ವಿಜೇತ ಕಲಾವಿದೆ ಅಕ್ಷತಾ ಪಾಂಡವಪುರ ಮನೋಜ್ಞ ತನ್ನ ಅಭಿನಯದ ಮೂಲಕ ಪ್ರೇಕ್ಷಕರಿಗೆ ತಿಳಿಸಿಕೊಟ್ಟರು.

ಈ ಸಂದರ್ಭದಲ್ಲಿ ನಿರ್ದೇಶಕ ಪ್ರಸನ್ನ, ಕಲಾವಿದೆ ಅಕ್ಷತಾ ಪಾಂಡವಪುರ, ಡಾ. ಆಶಾಚೌಧ್ರಿ ಹಾಗೂ ವಿಶ್ವವಿಜಯ ಶಾಲೆಯ ಮುಖ್ಯೋಪಾಧ್ಯಾಯಿನಿ ವಿಜಯಾವಿಶ್ವೇಶ್ವರಯ್ಯರವರುಗಳನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ರೋಟರಿ ಕ್ಲಬ್ ಅಧ್ಯಕ್ಷ ಎಸ್.ಕೆ.ಥಾಮಸ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಲಯನ್ಸ್ ಅಧ್ಯಕ್ಷ ಪ್ರದೀಪ್ ಕುಮಾರ್, ಡಾ.ನಾಗರಾಜ್, ಗ್ರಂಥಾಲಯದ ರಾಮಚಂದ್ರು, ಕುಮಾರಸ್ವಾಮಿ, ಸುನಿಲ್, ಶಂಕರಪ್ಪ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಂಜಣ್ಣ ಹಾಗೂ ಕಲಾವಿದರುಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು. ರೂಪಾ ಸ್ವಾಗತಿಸಿದರು. ರೇಖಾ ಕುಂದಾರು ನಾಟಕದ ಪರಿಚಯ ಮಾಡಿದರು. ಉಷಾ ಶ್ರೀನಿವಾಸ್ ವಂದಿಸಿದರು. ಹಂಸರೇಖಾ ದಿಲೀಪ್ ನಿರೂಪಿಸಿದರು.



ತುಮಕೂರಿನ ಮಾರಿಯಮ್ಮನಗರದಲ್ಲಿರುವ ಶ್ರೀ ಮಾರಿಯಮ್ಮದೇವಿಯವರ 54ನೇ ವರ್ಷದ ಜಾತ್ರಾ ಮಹೋತ್ಸವದ ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ಮಾನ್ಯ ಶಾಸಕರಾದ ಡಾ|| ರಫೀಕ್ ಅಹ್ಮದ್‌ರವರಿಗೆ ಶ್ರೀ ಮಾರಿಯಮ್ಮ ಯುವಕರ ಸಂಘ (ರಿ.)ದ ಯುವಕರು ಮತ್ತು ಮುಖಂಡರುಗಳು ಆಹ್ವಾನ ಪತ್ರಿಕೆಯನ್ನು ನೀಡಿದರು.



ಊರ್ಡಿಗೆರೆ ಮತ್ತು ಹಿರೇಹಳ್ಳಿ ಗ್ರಾಮದ ಜೆಡಿಎಸ್ ಅಲ್ಪಸಂಖ್ಯಾತರ ಜಿಲ್ಲಾಧ್ಯಕ್ಷರಾದ ಮಹಮ್ಮದ್ ಇಕ್ಬಾಲ್‌ರವರ ಸ್ವಗೃಹದಲ್ಲಿ ನಡೆದ ಇಫ್ತಿಯಾರ್ ಕೂಟದಲ್ಲಿ ಮಾಜಿ ಶಾಸಕರು ಹಾಗೂ ಜೆಡಿಎಸ್ ಮುಖಂಡರಾದ ಡಿ.ಸಿ.ಗೌರಿಶಂಕರ್ ರವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ತನ್ವೀರ್ ರೆಹಮಾನ್ ಖಾನ್, ಯಯಾಹ ಖಾನ್, ತಾಲ್ಲೂಕು ಅಧ್ಯಕ್ಷರಾದ ಕುಮಾರ್, ಎಸ್.ಸಿ. ಘಟಕದ ಅಧ್ಯಕ್ಷರಾದ ಹರಳೂರು ಸುರೇಶ್, ಯುವ ಘಟಕದ ಅಧ್ಯಕ್ಷರಾದ ಸುವರ್ಣಗಿರಿ ಕುಮಾರ್, ಊರ್ಡಿಗೆರೆ ಅಧ್ಯಕ್ಷರಾದ ನಾರಾಯಣ ಗೌಡ, ಗೂಳೂರು ಹೋಬಳಿ ಅಧ್ಯಕ್ಷ ಪಾಲನೇತ್ರಯ್ಯ, ಮುಜಾಹೀದ್ ಹಾಗೂ ಇತರೆ ಮುಸ್ಲಿಂ ಭಾಂಧವರು ಉಪಸ್ಥಿತರಿದ್ದರು.



ತುಮಕೂರು ನಗರದ ರಾಜೀವ್ ಗಾಂಧಿನಗರದ ವಾರ್ಡ್ ನಂ.11ರಲ್ಲಿನ ನಿವಾಸಿಗಳಿಗೆ ನೀರಿನ ವ್ಯವಸ್ಥೆಯು ಅನುಕೂಲವಾಗುವಂತೆ ಕೊಳವೆ ಬಾವಿಯನ್ನು ಕೊರೆಯಿಸಿ ನೀರಿನ ಸಮಸ್ಯೆಯನ್ನು ನಿವಾರಿಸಿದ್ದಕ್ಕಾಗಿ ನಗರ ಶಾಸಕರಾದ ಡಾ|| ರಫೀಕ್ ಅಹ್ಮದ್ ಮತ್ತು ಪಾಲಿಕೆ ಸದಸ್ಯರಾದ ಎಂ.ಎನ್.ವೆಂಕಟೇಶ್‌ರವರಿಗೆ ಬಡಾವಣೆಯ ಎಲ್ಲಾ ನಾಗರೀಕರು ಅಭಿನಂದಿಸಿದರು. ಚಿತ್ರದಲ್ಲಿ ನಯಾಜ್ ಅಹ್ಮದ್, ಇಕ್ಬಾಲ್, ಯಾಸೀನ್, ಶಿರೀನ್, ಶಕೀಲಾ ಬಾನು, ಸಾಲಿಮಬೀ, ಫರ್‌ಹಾನ, ಶಾಹಬಾಜ್, ಅಹ್ಮದ್ ಮತ್ತು ಸಾದ್ ಇದ್ದರು.



ಗೂಳೂರು ಹೋಬಳಿ ಘಟಕದ ಜೆಡಿಎಸ್‌ನ ಅಧ್ಯಕ್ಷರಾಗಿ ಜಿ.ಪಾಲನೇತ್ರಯ್ಯ ನೇಮಕ ವಾಗಿದ್ದಾರೆ.



ಊರ್ಡಿಗೆರೆ ಹೋಬಳಿ ಘಟಕದ ಜೆಡಿಎಸ್‌ನ ಅಧ್ಯಕ್ಷರನ್ನಾಗಿ ನಾರಾಯಣಗೌಡ ಜಿ.ರವರು ನೇಮಕ ವಾಗಿದ್ದಾರೆ.



ಸೋಮಶೇಖರಯ್ಯ ಜೆಡಿಎಸ್‌ನ ಊರ್ಡಿಗೆರೆ ಘಟಕದ ಕಾರ್ಯದರ್ಶಿಯಾಗಿ ನೇಮಕ ವಾಗಿದ್ದಾರೆ.

# ಯೋಗ ದಿನಾಚರಣೆ: ಭಾಗವಹಿಸುವಿಕೆ ಕಡ್ಡಾಯ

**ಪಾವಗಡ**

ಯೋಗ ದಿನಾಚರಣೆಯಂದು ಎಲ್ಲಾ ಸರ್ಕಾರಿ ನೌಕರರರು ಕಡ್ಡಾಯವಾಗಿ ಭಾಗವಹಿಸಬೇಕೇಂದು ತಾ.ಪ ಇ.ಒ. ಜಯರಾಂ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ನೀಡಿದರು.



ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಮಾರ್ಗ ಸೂಚಿಯಂತೆ ಜೂನ್ 21 ರಂದು ಯೋಗ ದಿನಾಚರಣೆಯನ್ನು ಸಂಭ್ರಮ ಸಡಗರಗಳಿಂದ ಆಚರಿಸಲು ಸಕಲ ಸಿದ್ದತೆಗಳನ್ನು ಕೈಗೊಳ್ಳಬೇಕೇಂದು ಸೂಚಿಸಿದರು.

ಯೋಗ ದಿನಾಚರಣೆಯನ್ನು ಕಾಟಚಾಚಾರಕ್ಕೆ ಆಚರಿಸದೇ ಅರ್ಥಪೂರ್ಣವಾಗಿ ಆಚರಿಸಲು ಎಲ್ಲರೂ ಶ್ರಮಿಸಬೇಕು ಎಂದರು, ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯ ಮಾರ್ಗದರ್ಶನದಲ್ಲಿ ಯೋಗ ದಿನಾಚರಣೆಯನ್ನು ಆಚರಿಸುತ್ತಿದ್ದು, ಅಂದು ಬೆಳಿಗ್ಗೆ ಪತಂಜಲಿ ಯೋಗಮಂದಿರದಲ್ಲಿ ನೂರಾರು ಯೋಗಪಟುಗಳಿಂದ ಯೋಗ ಪ್ರದರ್ಶನ ಇದ್ದು, 10 ಗಂಟೆಗೆ ಪಟ್ಟಣದಲ್ಲಿ ಶೋಭಾಯಾತ್ರೆಯನ್ನು ಏರ್ಪಡಿಸಿದ್ದು, ಮೆರವಣಿಗೆಯು ಮಂಗಳವಾದ್ಯದೊಂದಿಗೆ ಶಿಕ್ಷಣ ಇಲಾಖೆಯ ಶಾಲಾ ಮಕ್ಕಳು ವಸತಿ ನಿಲಯಗಳ ಮುರಾರ್ಜಿ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಲು ಕ್ರಮ ತೆಗೆದುಕೊಳ್ಳಬೇಕು ಹಾಗೂ ಅಂದು ಬೆಳಗ್ಗೆ ಶಾಲಾ ಮಕ್ಕಳಿಗೆ ಲಘು ಉಪಹಾರ ಏರ್ಪಡಿಸುವುದಾಗಿ ತಿಳಿಸಿದರು.

ಪತಂಜಲಿ ಯೋಗಶಿಕ್ಷಣ ಸಮಿತಿಯ ಕಾರ್ಯದರ್ಶಿ ವಿಜಯ ಕುಮಾರ್ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರು ಯೋಗವನ್ನು ಅಂತರಾಷ್ಟ್ರಿಯ ಮಟ್ಟಕ್ಕೆ ಕೊಂಡೊಯಿದ್ದು, ನಮ್ಮ ಪತಂಜಲಿ ಯೋಗಶಿಕ್ಷಣ ಸಮಿತಿಯಿಂದ 3 ನೇ ವರ್ಷದ ಯೋಗ ದಿನಾಚರಣೆಯನ್ನು ಆಚರಿಸುತ್ತಿದ್ದು, ಈಗಾಗಲೇ ಪಟ್ಟಣದಲ್ಲಿ 3 ಸ್ಥಳಗಳಲ್ಲಿ ಉಚಿತ ಯೋಗ ಶಿಬಿರಗಳನ್ನು ಏರ್ಪಡಿಸಿದ್ದು, ಜೂನ್ 2 ರಂದು ಸರ್ಕಾರ ಈ ಕಾರ್ಯಕ್ರಮಕ್ಕೆ ಕೈ ಜೋಡಿಸುತ್ತಿರುವುದರಿಂದ ಯೋಗ ಪಟುಗಳಿಗೆ ಆನೆ ಬಲ ಬಂದಂತಾಗುತ್ತದೆ. ಅಲ್ಲದೇ ರಾಷ್ಟ್ರಿಯ ಕಾರ್ಯಕ್ರಮಗಳ ಜೊತೆ ಯೋಗ ದಿನಾಚರಣೆಗೆ ತಾಲ್ಲೂಕಿನ ಇಲಾಖಾಧಿಕಾರಿಗಳು, ಶಾಲಾ ಮಕ್ಕಳು ಭಾಗವಹಿಸುತ್ತಿರುವುದು ಯೋಗ ದಿನಾಚರಣೆಗೆ ಇನ್ನಷ್ಟು ಮೆರಗು ತಂದುಕೊಡುತ್ತದೆ ಎಂದರು.

ಜಿ.ಪಂ. ಇಂಜನಿಯರ್ ದೇಶಪಾಂಡೆ, ಅಕ್ಷರ ದಾಸೋಹದ ಲಕ್ಷಣ್‌ಸಿಂಗ್, ತೋಟಗಾರಿಕಾ ಇಲಾಖಾಧಿಕಾರಿ ಜೈಪ್ರಕಾಶ್, ಬಿ.ಸಿ.ಎಂ. ಇಲಾಖಾಧಿಕಾರಿ ಮುರಳಿಧರ್, ಸಮಾಜಕಲ್ಯಾಣ ಇಲಾಖೆಯ ಹನುಮಂತರಾಯಪ್ಪ, ಸಾಕ್ಷರ ಭಾರತ್ ತಾ. ಸಂಯೋಜಕ ನರಸಿಂಹ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರಕೀಬ್, ಕೃಷಿ, ಶಿಕ್ಷಣ, ಮತ್ತು ರೇಷ್ಮೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಲೇಖನಗಳಿಗೆ ಆಹ್ವಾನ

**ತುಮಕೂರು**

ತುಮಕೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಎ.ಎಚ್. ರಾಜಾಸಾಬ್ ಅವರು ಜುಲೈ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿದ್ದು, ಇವರ ಹೆಸರಿನಲ್ಲಿ ಗೌರವಾರ್ಥ ಸಂಚಿಕೆಯನ್ನು ತರಲು ಇಚ್ಛಿಸಿದ್ದೇವೆ. ಆದ್ದರಿಂದ ತಾವುಗಳು ಪ್ರೊ.ಎ.ಎಚ್.ರಾಜಾಸಾಬ್ ಅವರನ್ನು ಕುರಿತು ಒಂದು ಲೇಖನವನ್ನು ನೀಡಬೇಕೆಂದು ಈ ಮೂಲಕ ಮನವಿ. ಲೇಖನವು 'ಸಹೃದಯಿ ಪ್ರೊ.ಎ.ಎಚ್.ರಾಜಾಸಾಬ್, ಗೌರವ ಸಂಚಿಕೆ ಸಮಿತಿ, ಶ್ರೀ ಮೈಲಾರಲಿಂಗೇಶ್ವರಸ್ವಾಮಿ ನಿಲಯ, 5ನೇ ಅಡ್ಡರಸ್ತೆ, ಎಸ್.ಐ.ಟಿ. ಬಡಾವಣೆ, ತುಮಕೂರು ಇಲ್ಲಿಗೆ ಅಥವಾ ಇ-ಮೇಲ್ gtmedigeshi@gmail.com ಇಲ್ಲಿಗೆ ಕಳುಹಿಸಲು ಕೋರಲಾಗಿದೆ.

# ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

**ತುಮಕೂರು**

2016-17ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ದಲಿತ, ಅಲೆಮಾರಿ ಮತ್ತು ಶೋಷಿತ ಸಮುದಾಯಗಳ ಅಭ್ಯರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 10 ದಿನಗಳ ಒಳಗೆ ಜಾತಿ ಪ್ರಮಾಣ ಪತ್ರ, ಅಂಕಪಟ್ಟಿ ಜೆರಾಕ್ಸ್ ಪ್ರತಿಗಳನ್ನು ಶೋಷಿತ ತಳ ಸಮುದಾಯಗಳ ಒಕ್ಕೂಟ, ಶ್ರೀ ಮಂಜುನಾಥ ಕಾಂಪ್ಲೆಕ್ಸ್, ತಾಲ್ಲೂಕು ಕಚೇರಿ ಎದುರು, ಬಿ.ಎಂ. ರಸ್ತೆ, ಕುಣಿಗಲ್ ಇಲ್ಲಿಗೆ ಕಳುಹಿಸಿಕೊಡಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ 9731318029, 9964164651 ಇವರನ್ನು ಸಂಪರ್ಕಿಸುವುದು.

# ಹವಾಮಾನ ಅಧಾರಿತ ಬೆಳೆ ವಿಮೆ ಯೋಜನೆ

**ಪಾವಗಡ**

2017-18 ನೇ ಸಾಲಿನ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ ಜಾರಿಯಾಗಿದ್ದು, ತಾಲ್ಲೂಕಿನ ಅಡಿಕೆ, ಮಾವು, ದಾಳಿಂಬೆ ಬೆಳೆಗಳಿಗೆ ಮಾತ್ರ ಈ ಯೋಜನೆ ಅನ್ವಯವಾಗಲಿದ್ದು, ರೈತರು ಪಹಣಿ, ಬ್ಯಾಂಕ್ ಖಾತೆ ಪುಸ್ತಕ, ಆಧಾರ್ ನಕಲು ಪ್ರತಿಗಳೊಂದಿಗೆ ದಿನಾಂಕ 30-6-2017 ರೊಳಗಾಗಿ ಯಾವುದಾದರೂ ರಾಷ್ಟ್ರಿಕೃತ ಬ್ಯಾಂಕುಗಳಲ್ಲಿ ನೋಂದಣಿ ಮಾಡಿಸಲು ತೋಟಗಾರಿಕಾ ಇಲಾಖಾಧಿಕಾರಿ ಜೈಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪಾಸ್‌ಪೋರ್ಟ್ ಸೇವಾ ಕೇಂದ್ರ

»1ನೇ ಪುಟದಿಂದ ವ್ಯವಹಾರ, ಉದ್ಯಮದಾರರಿಗೆ ಈ ಕೇಂದ್ರ ಹೆಚ್ಚು ಅನುಕೂಲವಾಗಲಿದೆ. ಇನ್ನು ಮುಂದೆ ಸರಳ, ಸುಲಭ ಮತ್ತು ತುರ್ತಾಗಿ ಪಾಸ್‌ಪೋರ್ಟ್ ಪಡೆಯಲು ಸಾಧ್ಯವಾಗುತ್ತದೆ.

ತುಮಕೂರು ಜಿಲ್ಲೆ ಕಲ್ಪತರು ನಾಡು ಶೈಕ್ಷಣಿಕವಾಗಿ ಹೆಸರು ಮಾಡಿದೆ. ಇಸ್ರೋ, ಎಚ್‌ಎಎಲ್, ಸ್ಮಾರ್ಟ್ ಸಿಟಿ, ಕೈಗಾರಿಕಾ ಸ್ಮಾರ್ಟ್ ಸಿಟಿ ಹೀಗೆ ಶರವೇಗದಲ್ಲಿ ಅಭಿವೃದ್ಧಿಯತ್ತ ಮುನ್ನುಗ್ಗುತ್ತಿರುವ ತುಮಕೂರಿಗೆ ಪಾಸ್ ಪೋರ್ಟ್ ಸೇವಾ ಕೇಂದ್ರ ಅನಿವಾರ್ಯವಾಗಿತ್ತು. ನಾನೊಬ್ಬ ಲೋಕಸಭಾ ಸದಸ್ಯನಾಗಿ ಜನರ ಬೇಡಿಕೆಗೆ ಸ್ಪಂದಿಸಿ ಕೆಲಸ ಮಾಡಿದ್ದೇನೆ. ವಿದೇಶಾಂಗ ಸಚಿವರು ನಮ್ಮ ಬೇಡಿಕೆಗೆ ಸ್ಪಂದಿಸಿದ್ದಾರೆ. ಕೇಂದ್ರ ಸರ್ಕಾರಕ್ಕೆ ಮತ್ತು ವಿದೇಶಾಂಗ ಸಚಿವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎನ್ನುವ ಸಂಸದ ಎಸ್.ಪಿ. ಮುದ್ದಹನುಮೇಗೌಡ ಅವರು, ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ತುಮಕೂರು ನಗರದಲ್ಲಿ ಶೀಘ್ರವಾಗಿ ಪ್ರಾರಂಭಿಸಲಾಗುವುದು ಎನ್ನುತ್ತಾರೆ.

# ಹವಾಮಾನ ಆಧಾರಿತ ಬೆಳೆ ವಿಮೆಗೆ ಅರ್ಜಿ

**ಗುಬ್ಬಿ**

ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿಯಲ್ಲಿ 2017-18 ನೇ ಸಾಲಿಗೆ ಆದಿಸೂಚನೆ ಹೊರಡಿಸಿರುವ ಬೆಳೆಗಳಿಗೆ ಸಾಲ ಪಡೆಯುವ ರೈತರಿಗೆ ಕಡ್ಡಾಯವಾಗಿ ವಿಮೆಗೆ ಒಳಪಡಸಿದ್ದು ಹಾಗೂ ಬೆಳೆ ಸಾಲ ಪಡೆಯುವ ರೈತರಿಗೆ ಈ ಯೋಜನೆ ಅತ್ಯವಶ್ಯಕವಾಗಿದೆ. ತಾಲ್ಲೂಕಿನ ಅಡಿಕೆ, ದಾಳಿಂಬೆ, ಪರಂಗಿ ಮತ್ತು ಮಾವು ಬೆಳೆಗಳನ್ನು ಈ ಯೋಜನೆಗೆ ಒಳಪಡಿಸಿದ್ದು, ಬೆಳೆಗಳಿಗೆ ವಿಮೆ ಮಾಡಿಸುವ ರೈತರು ಕೂಡಲೆ ನಿಗಧಿತ ಅರ್ಜಿಯೊಂದಿಗೆ ಪ್ರಸಕ್ತ ಸಾಲಿನ ಭೂಮಿ ಹೊಂದಿರುವ ದಾಖಲೆಗಳಾದ ಪಹಣಿ, ಭ್ಯಾಂಕ್ ಖಾತೆ ಪುಸ್ತಕ, ಆಧಾರ್ ನಕಲು ಪ್ರತಿಗಳು ಮತ್ತು ಸ್ವಯಂಘೋಷಿತ ಬೆಳೆ ವಿವರಗಳೊಂದಿಗೆ ತಾಲ್ಲೂಕಿನ ಯಾವುದಾದರೂ ರಾಷ್ಟ್ರೀಕೃತ ಅಧಿಕೃತ ಬ್ಯಾಂಕ್‌ಗಳಲ್ಲಿ ನೋಂದಣಿ ಮಾಡಿಸಬಹುದಾಗಿದೆ. ಅರ್ಜಿಗಳನ್ನು ರಾಷ್ಟ್ರೀಕೃತ ಭ್ಯಾಂಕ್‌ಗಳಲ್ಲಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ಪಡೆಯಬಹುದಾಗಿದೆ ಅರ್ಜಿ ಸಲ್ಲಿಸಲು ಜೂ.30 ಕೊನೆಯ ದಿನವಾಗಿರುತ್ತದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ಅಧಿಕಾರಿ ಸುಧಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಳಿಯಾರಿನ ಜಾಮೀಯಾ ಮಸೀದಿಯ ಅಭಿವೃದ್ಧಿ ಕಾಮಗಾರಿಯನ್ನು ಸಂಸದ ಎಸ್.ಪಿ.ಮುದ್ದಹನುಮೇಗೌಡ ವೀಕ್ಷಿಸಿದರು.

# ಮುಂಗಾರು ಫಸಲಿನ ನಿರೀಕ್ಷೆಯಲ್ಲಿ ರೈತರು

»1ನೇ ಪುಟದಿಂದ ಯೋಜನೆಯಡಿ ಮಿನಿ ಟ್ರಾಕ್ಟರ್, ಟಿಲ್ಲರ್, ಕಲ್ಟೀವೇಟರ್, ರೋಟೋವೇಟರ್, ಸಿಂಪರಣಾ ಯಂತ್ರ, ಕಳೆಕೊಚ್ಚುವ ಯಂತ್ರಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದ್ದು ರೈತರು ಅರ್ಜಿಗಳನ್ನು ಕೃಷಿ ಇಲಾಖೆಗೆ ಸಲ್ಲಿಸುವುದರ ಜೊತೆಗೆ ಆನ್‌ಲೈನ್ ಮೂಲಕ ನೋಂದಣಿ ಮಾಡಿಸಬೇಕಾಗುತ್ತದೆ. ಜೇಷ್ಠತಾ ಪಟ್ಟಿಯ ಆದಾರದ ಮೇರೆಗೆ ಕೃಷಿ ಕೃಷಿ ಯಂತ್ರೋಪಕರಣಗಳನ್ನು ವಿತರಣೆ ಮಾಡಿಲಾಗುವುದು.

ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ ಸಮಗ್ರ ಕೃಷಿ ಅಭಿಯಾನ ಕಾರ್ಯಕ್ರಮಗಳನ್ನು ವಿವಿಧ ಇಲಾಖೆಗಳ ಸಹಯೋಗದಲ್ಲಿ ತಾಲ್ಲೂಕಿನ 34 ಗ್ರಾಮ ಪಂಚಾಯ್ತಿ ಕೇಂದ್ರಗಳಲ್ಲಿ ಜೂ.21 ರಿಂದ ಜುಲೈ 17 ರವರೆಗೆ ನಡೆಸಲಾಗುತ್ತಿದ್ದು ಅಭಿಯಾನ ಕಾರ್ಯಕ್ರಮದಲ್ಲಿ ಹೋಬಳಿ ಮಟ್ಟದ ರೈತ ಸಂವಾದ ಮತ್ತು ಕೃಷಿ ವಸ್ತು ಪ್ರದರ್ಶನಗಳನ್ನು ನಡೆಸಲಾಗುವುದು.

ಕಾರ್ಯಕ್ರಮಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಲೋಕಸಬಾ ಸದಸ್ಯರು, ಶಾಸಕರು, ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಕೃಷಿಕ ಸಮಾಜದ ಅಧ್ಯಕ್ಷರ ಮತ್ತು ಸದಸ್ಯರು, ಚುನಾಯಿತ ಪ್ರತಿನಿಧಿಗಳು, ರೈತ ಶಕ್ತಿ ಸಂಘದ ಸದಸ್ಯರು ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಲಿದ್ದಾರೆಂದು ಸಹಾಯಕ ಕೃಷಿ ನಿರ್ದೇಶಕ ಚಿಕ್ಕಪ್ಪಯ್ಯ ತಿಳಿಸಿದ್ದಾರೆ.

# ರೈತರ ಬಗ್ಗೆ ಕಾಳಜಿ ಇಲ್ಲ : ಕೆಎನ್‌ಆರ್

»1ನೇ ಪುಟದಿಂದ ತರ್ಕದಲ್ಲಿ ಕಾಲ ಕಳೆಯುತ್ತಿದ್ದಾರೆ. ತಾಲೂಕಿನ ನಿರುದ್ಯೋಗಿ ಯುವಕರು ಉದ್ಯೋಗ ಅರಸಿ ಬೇರೆಡೆಗೆ ಹೋಗುವುದನ್ನು ತಪ್ಪಿಸಲು ಸುಮಾರು 250 ಎಕರೆ ಪ್ರದೇಶದಲ್ಲಿ ಕೈಗಾರಿಕೆ ಪ್ರಾರಂಭಿಸಲು ಚಿಂತಿಸಲಾಗುತ್ತಿದ್ದು ಇದರಿಂದ ದುಡಿಯುವ ಕೈಗಳಿಗೆ ಉದ್ಯೋಗ ಸಿಗಲಿದೆ ಎಂದರು.

ಜಿ.ಪಂ ಸದಸ್ಯ ಜಿ.ಜೆ.ರಾಜಣ್ಣ ಮಾತನಾಡಿ ಈ ಹಿಂದೆ ದೇವಾಲಯದ ಭಕ್ತರ ಮನವಿಯಂತೆ ರಸ್ತೆ ಡಾಂಬರೀಕರಣಗೊಳಿಸಲಾಗಿದೆ ಮುಂದಿನ ದಿನಗಳಲ್ಲಿ ಒಂದು ಸಮುದಾಯ ಭವನ ನಿರ್ಮಿಸಿ ಕೊಡುವಂತೆ ಶಾಸಕರಿಗೆ ಮನವಿ ಮಾಡಿದರು.

ತಾ.ಪಂ ಅಧ್ಯಕ್ಷೆ ಇಂದಿರಾ, ಉಪಾಧ್ಯಕ್ಷ ಲಕ್ಷ್ಮೀನರಸಪ್ಪ, ಸದಸ್ಯ ಬಿ.ಜಿ.ರಂಗನಾಥ್, ಪುರಸಭೆ ಅಧ್ಯಕ್ಷೆ ರಾಧಾನಾರಾಯಣ್, ತುಮಕೂರು ಎಪಿಎಂಸಿ ಅಧ್ಯಕ್ಷ ಗಂಗಾಧರಪ್ಪ, ಎಪಿಎಂಸಿ ಅಧ್ಯಕ್ಷ ಪಿ.ಟಿ.ಗೋವಿಂದಯ್ಯ, ಸದಸ್ಯರಾದ ಪಿ.ಸಿ.ಕೃಷ್ಣಾರೆಡ್ಡಿ, ಎಂ.ಬಿ.ಮರಿಯಣ್ಣ, ಮರುವೇಕೆರೆ ಗ್ರಾ.ಪಂ ಅಧ್ಯಕ್ಷೆ ರಂಗಮ್ಮ, ಭೂ ಸೇನಾ ನಿಗಮದ ಇಂಜಿನಿಯರ್ ಶಾಂತರಾಜು, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಇಂಜಿನಿಯರ್ ಬ್ರಹ್ಮದೇವರು, ಸರಕಾರಿ ನೌಕರರ ಸಂಘದ ಅಧ್ಯಕ್ಷ ಎನ್.ಮಹಾಲಿಂಗೇಶ್, ಡಿಸಿಸಿ ಬ್ಯಾಂಕ್ ಸೀತಾರಾಂ, ಪಾಂಡುರಂಗಾರೆಡ್ಡಿ, ಮಾಜಿ ತಾ.ಪಂ ಸದಸ್ಯ ಮಂಜುನಾಥ್, ದೇವಸ್ಥಾನದ ಧರ್ಮದರ್ಶಿ ದೇವದಾಸ್, ದಾನಿಗಳಾದ ಸೋಂಪುರ ರಂಗಪ್ಪ, ನಾರಾಯಣಶೆಟ್ಟಿ, ಗುತ್ತಿಗೆದಾರ ವಿಮಲ್‌ರಾಜ್ ಮುಂತಾದವರು ಉಪಸ್ಥಿತರಿದ್ದರು.


## ನಿರಾಶ್ರಿತರ ಪರಿಹಾರ ಕೇಂದ್ರ, ತುಮಕೂರು.

ಅಜ್ಜಗೊಂಡನಹಳ್ಳಿ, ತುಮಕೂರು

ನಂ: ನಿಪಕೇತು/ಟೆಂಡರ್/ಸಿಆರ್/12/2017-18 ದಿನಾಂಕ:12-06-2017

**ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

2017-18ನೇ ಸಾಲಿಗಾಗಿ ನಿರಾಶ್ರಿತರ ಪರಿಹಾರ ಕೇಂದ್ರ, ತುಮಕೂರು. ಇಲ್ಲಿನ ನಿರಾಶ್ರಿತರ ಉಪಯೋಗಕ್ಕಾಗಿ ಆಹಾರ ಪದಾರ್ಥಗಳು, ವಿಶೇಷ ಆಹಾರ ಪದಾರ್ಥಗಳು ಹಾಗೂ ಇತರೆ ಅಗತ್ಯ ಸಾಮಗ್ರಿಗಳನ್ನು ಖರೀದಿಗಾಗಿ ಹಾಗೂ ಹೊರಸಂಪನ್ಮೂಲದಿಂದ ಮಾನವ ಸೇವೆಯನ್ನು ಪಡೆಯಲು, ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಹಾಗೂ ಇಚ್ಛೆವುಳ್ಳ ಟೆಂಡರ್‌ದಾರರು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳ ಅಡಿಯಲ್ಲಿ ಸ್ಪರ್ಧಾತ್ಮಕ ದರಗಳಿಗೆ ಇ-ಟೆಂಡರ್ ವೇದಿಕೆಯ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

| ಕ್ರ.ಸಂ | ಟೆಂಡರ್ ವಿವರ | ಟೆಂಡರ್ ಪ್ರಕಟಣೆ ಸಂಖ್ಯೆ: ದಿನಾಂಕ | ಟೆಂಡರ್ ಅಂದಾಜು ಮೊತ್ತ | ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ತಾಂತ್ರಿಕ ಬಿಡ್ ತೆರೆಯುವ ದಿನಾಂಕ | ಆರ್ಥಿಕ ಬಿಡ್ ತೆರೆಯುವ ದಿನಾಂಕ | ಇ ಎಂ ಡಿ ಮೊತ್ತ |
|---|---|---|---|---|---|---|---|
| 1 | ಆಹಾರ ಪದಾರ್ಥಗಳ ಪೂರೈಕೆ | ನಿಪಕೇತು/ಟೆಂಡರ್.ಸಿಆರ್ 12/2017-18 12-06-2017 | 40,00,000 | 14-07-2017 ಸಂಜೆ 4-00 ಗಂಟೆಗೆ | 16-07-2017 ಬೆಳಗ್ಗೆ 11.00 ಗಂಟೆಗೆ | 17-07-2017 ಬೆಳಗ್ಗೆ 11.00 ಗಂಟೆಗೆ | ರೂ 1,00,000 |
| 2 | ಹೊರಸಂಪನ್ಮೂಲ ಮಾನವ ಸೇವೆ | ನಿಪಕೇತು/ಟೆಂಡರ್/ಸಿಆರ್ 10/2017-18 12-06-217 | 12,00,000 | 14-07-2017 ಸಂಜೆ 4-00 ಗಂಟೆಗೆ | 1-07-2017 ಬೆಳಗೆ 12-00 ಗಂಟೆಗೆ | 17-07-2017 ಬೆಳಗ್ಗೆ 11.00 ಗಂಟೆಗೆ | ರೂ 24,000 |

ಹೆಚ್ಚಿನ ಮಾಹಿತಿಗಾಗಿ www.eproc.karanataka.gov.in ಅಥವಾ ಅಧೀಕ್ಷಕರು ನಿರಾಶ್ರಿತರ ಪರಿಹಾರ ಕೇಂದ್ರ, ಅಜಗೊಂಡನಹಳ್ಳಿ ತುಮಕೂರು ಇವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು.

ಸಹಿ/- ಅಧೀಕ್ಷಕರು

ನಿರಾಶ್ರಿತರ ಪರಿಹಾರ ಕೇಂದ್ರ, ತುಮಕೂರು


# ನಂದಿಹಳ್ಳಿಯ ಅಪ್ಪಣೆ ಕೊಡುವ ಬಸವ ಸಾವು

**ಹುಳಿಯಾರು**

ಹುಳಿಯಾರು ಹೋಬಳಿಯ ನಂದಿಹಳ್ಳಿ ಗ್ರಾಮದಲ್ಲಿ 2 ದಶಕಗಳಿಂದ ಅಪ್ಪಣೆ ಕೊಡುವ ಬಸವನೆಂದೇ ಪ್ರಸಿದ್ಧಿ ಪಡೆದಿದ್ದ ಶ್ರೀ ನಂದಿಬಸವೇಶ್ವರ ಸ್ವಾಮಿ ಅವರ ಪಟ್ಟದಬಸವ ಸಾವನ್ನಪ್ಪಿದೆ.

ಇಲ್ಲಿನ ಶ್ರೀನಂದಿಬಸವೇಶ್ವರ ಸ್ವಾಮಿಗೆ 30 ವರ್ಷಗಳ ಹಿಂದೆಬಸವನನ್ನು ಬಿಡಲಾಗಿತ್ತು. ಶ್ರೀ ಸ್ವಾಮಿಯವರ ಜಾತ್ರೆ ಸೇರಿದಂತೆ ಊರಿನ ಯಾವುದೇ ಧಾರ್ಮಿಕ ಕೈಂಕಯಗಳನ್ನು ಈ ಬಸವನ ನೇತೃತ್ವದಲ್ಲಿ ನಡೆಸಲಾಗುತ್ತಿತ್ತು. ಇಪ್ಪತ್ತು ವರ್ಷಗಳ ಹಿಂದೆ ಅಪ್ಪಣೆ ಸಹ ಕೊಡುತ್ತಿದ್ದರಿಂದ ದೇವರ ಕಾರ್ಯಗಳಿಗೆ ಬಳಸದೆ ಬಸವನನ್ನೇ ದೇವರೆಂದು ಪೂಜಿಸುವ ಪರಿಪಾಠ ಬೆಳೆಯಿತು. ನಂದಿಹಳ್ಳಿ ಗ್ರಾಮದವರಲ್ಲದೆ ಅಕ್ಕಪಕ್ಕದ ಊರಿನ ಜನರು ಮನೆ ಕಟ್ಟುವ, ಜಮೀನು ಕೊಳ್ಳುವ, ಶುಭ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಬಸವನ ಅಪ್ಪಣೆ ಕೇಳುವ ವಾಡಿಕೆ ಬೆಳೆಸಿಕೊಂಡಿದ್ದರು. ಅಪ್ಪಣೆ ಕೇಳುವವರ ಕಾರ್ಯ ನೆರವೇರುವುದಾದರೆ ಬಲಗಾಲನ್ನು ಮುಂದಿಡುತ್ತಿತ್ತು. ಇಲ್ಲವಾದಲ್ಲಿ ಎಡಗಾಲನ್ನು ಮುಂದಿಡುವ ಮೂಲಕ ಅಪ್ಪಣೆ ಕೊಡುತ್ತಿತ್ತು.



ಅಪ್ಪಣೆ ಪಡೆದವರು ಬಸವನ ಕೊಂಬಿಗೆ ಕಾಣಿಕೆ ಹಣ ಕಟ್ಟುತ್ತಿದ್ದರು. ಹಾಗಾಗಿ ಸುತ್ತಮುತ್ತಲ ಪ್ರೀತಿಯ ಬಸವನಾಗಿದ್ದು ಅಕ್ಕಿ-ಬೆಲ್ಲ ಕೊಟ್ಟು ಗ್ರಾಮಸ್ಥರು ಪ್ರೀತಿಯಿಂದ ಸಾಕುತ್ತಿದ್ದರು.

ಈ ಬಸವನ ಪ್ರಖ್ಯಾತಿ ಹೇಗಿತ್ತೆಂದರೆ ಸುತ್ತಮುತ್ತಲ ಹಳ್ಳಿಗಳ ದೇವಸ್ಥಾನ ಪ್ರಾರಂಭೋತ್ಸವ, ಗೃಹ ಪ್ರವೇಶ ಹೀಗೆ ಶುಭ ಕಾರ್ಯಗಳಿಗೆ ಕರೆಸಿಕೊಂಡು ಮೊದಲು ಬಸವನಿಗೆ ಅಕ್ಕಿಬೆಲ್ಲ ಕೊಟ್ಟು ಚಾಲನೆ ನೀಡುತ್ತಿದ್ದರು. ಆದರೆ ವಯೋಸಹಜ ಅನಾರೋಗ್ಯಕ್ಕೆ ತುತ್ತಾಗಿದ್ದ ಬಸವ ಶ್ರೀ ನಂದಿ ಬಸವೇಶ್ವರ ಸ್ವಾಮಿ ದೇವಸ್ಥಾನದ ಮುಂದೆಯೇ ಕೊನೆಯುಸಿರೆಳೆಯಿತು.

ಮೊದಲೇ ಗ್ರಾಮದ ಪ್ರೀತಿಯ ಬಸವವಾದ್ದರಿಂದ ತರಹೇವಾರಿ ಪುಷ್ಪಗಳಿಂದ ಅಲಂಕಾರಗೊಂಡ ವಾದ್ಯದೊಂದಿಗೆಮೃತ ಬಸವನ ಮೆರವಣಿಗೆಯನ್ನು ನಂದಿಹಳ್ಳಿ ಗ್ರಾಮದಲ್ಲಿಮಾಡಿನಂತರ ಗಂಗಮ್ಮನ ಬಾವಿ ಬಳಿ ಕರೆದೊಯ್ದುಶ್ರದ್ಧಾ ಭಕ್ತಿಯಿಂದ ಅಂತ್ಯ ಸಂಸ್ಕಾರ ನೆರವೇರಿಸಿದರು. ವೃದ್ಧರು, ಮಕ್ಕಳು, ಮಹಿಳೆಯರೆನ್ನದೆ ಇಡೀ ಊರಿಗೆ ಊರೇ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡು ಆಶ್ರುದರ್ಪಣ ಸಲ್ಲಿಸಿದರು.

18.06.2017.indd 5 6/19/2017 12:33:36 AM